# An Objective Review of ‘Nikasha’ of C P Siddhashrama

**DrMunishamappa A**
Associate Professor
GFGC, Bangarapet, Kolar

## ಸಿ.ಪಿ.ಸಿದ್ಧಾಶ್ರಮ ಅವರ ‘ನಿಕಷ’– ವಸ್ತು ನಿಷ್ಠ ವಿಮರ್ಶೆ

**ಡಾ.ಎ.ಮುನಿಶಾಮಪ್ಪ**

ಕನ್ನಡ ಸಾಹಿತ್ಯ ವಿಮರ್ಶಾ ಕ್ಷೇತ್ರಕ್ಕೆ ಸಿ.ಪಿ.ಸಿದ್ಧಾಶ್ರಮ ಅವರು ಗಣನೀಯ ಕೊಡುಗೆ ನೀಡಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಪ್ರಾಧ್ಯಾಪಕರಾಗಿರುವ ಅವರು ಹಲವು ಸಾಹಿತ್ಯ ವಿಮರ್ಶಾ ಸಂಕಲನಗಳನ್ನು ಪ್ರಕಟಿಸಿ, ಕನ್ನಡದ ಪ್ರಮುಖ ವಿಮರ್ಶಕರ ಸಾಲಿನಲ್ಲಿ ಒಬ್ಬರಾಗಿದ್ದಾರೆ. ‘ಮಾಸ್ತಿಯವರ ಕಾವ್ಯಗಳು – ಒಂದು ಅಧ್ಯಯನ’, ‘ಹೊಳಹು’, ‘ಹೊಸಲೀಲೆ’, ‘ಕರ್ನಾಟಕ ದಲಿತ ಸಾಹಿತ್ಯ’ ಮತ್ತು ‘ನಿಕಷ’ ಎಂಬ ವಿದ್ವತ್ ಕೃತಿಗಳು ಅವರ ಪ್ರತಿಭೆ, ಪಾಂಡಿತ್ಯಗಳಿಗೆ ಸಾಕ್ಷಿಯಾಗಿವೆ. ಅಲ್ಲದೆ ನಾಡಿನ ಪ್ರಮುಖ ಪತ್ರಿಕೆಗಳು ಮತ್ತು ಕೆಲವು ಸಂಪಾದಿತ ಕೃತಿಗಳಲ್ಲಿ ಸಿದ್ಧಾಶ್ರಮ ಅವರ ಲೇಖನಗಳು ಪ್ರಕಟವಾಗುತ್ತಿದ್ದು, ಅವರು ಸಮಕಾಲೀನ ಲೇಖಕರಾಗಿ ಖ್ಯಾತರಾಗಿದ್ದಾರೆ.

ಸಿದ್ಧಾಶ್ರಮ ಅವರ ‘ನಿಕಷ’ ವಸ್ತು ವೈವಿಧ್ಯತೆಯಿಂದ ಕೂಡಿದ ಒಂಬತ್ತು ಲೇಖನಗಳನ್ನು ಒಳಗೊಂಡ ವಿಮರ್ಶಾ ಸಂಕಲನ. ಸೃಜನಶೀಲ ಸಾಹಿತ್ಯವನ್ನು ಕುರಿತ ಆರು ವಿಮರ್ಶಾ ಲೇಖನಗಳು, ವಿಮರ್ಶಾ ಸಂಕಲನಗಳನ್ನು ಕುರಿತ ಎರಡು ಲೇಖನಗಳು ಹಾಗೂ ಬಂಡಾಯ ಸಾಹಿತ್ಯ ಸಂಘಟನೆಯನ್ನು ಕುರಿತ ಚಿಂತನಶೀಲವಾದ ಒಂದು ಲೇಖನ ಈ ಕೃತಿಯಲ್ಲಿವೆ. ಇಲ್ಲಿನ ಬಹುಪಾಲು ಲೇಖನಗಳು ಸಾಹಿತ್ಯ ವಿಮರ್ಶೆಗೆ ಮೀಸಲಾಗಿರುವುದರಿಂದ ‘ನಿಕಷ’ವನ್ನು ವಿಮರ್ಶಾ ಕೃತಿಯೆಂದು ಪರಿಗಣಿಸಲಾಗಿದೆ.

‘ನಿಕಷ’ದ ಪ್ರತಿಯೊಂದು ಲೇಖನದ ಹಿಂದೆಯೂ ಸಿದ್ಧಾಶ್ರಮ ಅವರ ಆಳವಾದ ಅಧ್ಯಯನವಿಚ್ಚ ಎಂಬುದನ್ನು ಗ್ರಹಿಸಬಹುದು. ತಮ್ಮ ಪಾಂಡಿತ್ಯ ಮತ್ತು ಸೂಕ್ಷ್ಮ ದೃಷ್ಟಿಗಳನ್ನು ಸಮರ್ಥವಾಗಿ ಬಳಸಿಕೊಂಡು ಲೇಖಕರು ಸಾಹಿತ್ಯ ವಿಮರ್ಶೆಗೆ ತೊಡಗಿದ್ದಾರೆಂಬುದು ‘ನಿಕಷ’ದ ಅಧ್ಯಯನದಿಂದ ವೇದ್ಯವಾಗುತ್ತದೆ. ‘ದಾಸ ಸಾಹಿತ್ಯದಲ್ಲಿ ಸಾಮಾಜಿಕ ಮೌಲ್ಯಗಳು’ ಎಂಬ ಲೇಖನದಲ್ಲಿ ಹದಿನೈದನೆಯ ಶತಮಾನದ ಹರಿದಾಸರ ಕೀರ್ತನೆಗಳಲ್ಲಿ ಪ್ರಕಟಗೊಂಡಿರುವ ಸಾಮಾಜಿಕ ಮೌಲ್ಯಗಳನ್ನು ಕುರಿತುಚರ್ಚಿಸಲಾಗಿದೆ. ‘ಸಾಮಾಜಿಕ ಮೌಲ್ಯಗಳು’ ಎಂದು ಲೇಖನಕ್ಕೆ ಶೀರ್ಷಿಕೆ ನೀಡಿದ್ದರೂ ಅಂತರಂಗದಲ್ಲಿ ಕಾಣುವುದು ಪ್ರಮುಖ ಹರಿದಾಸರ ಸಾಹಿತ್ಯದಲ್ಲಿನ ಸಾಮಾಜಿಕ ಪ್ರಜ್ಞೆಯಾಗಿದೆ. “ ವಚನ ಸಾಹಿತ್ಯ ಮತ್ತುದಾಸ ಸಾಹಿತ್ಯಗಳ ಮೂಲ ಉದ್ದೇಶ ಧರ್ಮ ಪ್ರಸಾರವೇ ಆಗಿದ್ದರೂ ಸಾಂದರ್ಭಿಕವಾಗಿ ಮತ್ತು ಸಹಜವಾಗಿಅಲ್ಲಿ ಪ್ರಕಟಗೊಂಡ ಸಾಮಾಜಿಕ ಪ್ರಜ್ಞೆ ಇಪ್ಪತ್ತನೇ ಶತಮಾನದ ನೈಜ ವಿಚಾರವಾದಿಯನ್ನು ಬೆರಗುಗೊಳಿಸುವಂಥದ್ದಾಗಿದೆ” ಎಂಬ ನುಡಿಗಳು ಮೇಲಿನ ಮಾತಿಗೆ ಪುಷ್ಟಿ ನೀಡುತ್ತವೆ. ‘ಪ್ರಜ್ಞೆ’ ಮತ್ತು ‘ಮೌಲ್ಯ’ಗಳು ಸಮಾನಾರ್ಥಕಗಳಲ್ಲವೆಂಬುದನ್ನು ಮನಗಾಣಬೇಕು. ಅಂದಿನ ಸಾಂಪ್ರದಾಯಿಕ ಸಾಮಾಜಿಕ ವ್ಯವಸ್ಥೆಯಲ್ಲಿ ಶಿವಶರಣರು ಮತ್ತು ಹರಿದಾಸರು ಜನಸಾಮಾನ್ಯರ ಮೌಢ್ಯ, ಅಜ್ಞಾನ, ಅಂಧಾಚರಣೆಗಳು ಮತ್ತು ಪುರೋಹಿತಶಾಹಿಯ ಡಾಂಭಿಕತನದ ವಿರುದ್ಧ ದನಿ ಎತ್ತಿದ್ದು ಸಾಮಾನ್ಯ ಸಂಗತಿಯಲ್ಲ. ಆದ್ದರಿಂದ ಸಿದ್ಧಾಶ್ರಮ ಅವರ ಮಾತುಗಳು ಸಮಂಜಸವಾಗಿವೆ.

ಇಡೀ ದಾಸ ಪಂಥದಲಿ ಪ್ರಖರವಾದ ಸಾಮಾಜಿಕ ಪ್ರಜ್ಞೆಯನ್ನು ಕಾಣುವುದು ಕನಕದಾಸರ ಕೃತಿಗಳಲ್ಲಿ. ಸಮಾಜದ ಕೆಳವರ್ಗದಿಂದ ಬಂದ ಕನಕದಾಸರು ದೈವಭಕ್ತರಾಗಿ, ಸಂತರಾಗಿ, ಅನುಭಾವಿಯಾಗಿ, ಸಾಧಕರಾಗಿ, ವಿಶೇಷ ಪ್ರತಿಭೆ, ಪಾಂಡಿತ್ಯಗಳನ್ನು ಹೊಂದಿದ್ದರೂ, ಅಂದಿನ ವರ್ಣನಿಷ್ಠ, ಜಾತಿನಿಷ್ಠ ವ್ಯವಸ್ಥೆಯಲ್ಲಿ ತೀವ್ರ ಅವಮಾನ ಮತ್ತು ಹಿಂಸೆಗಳಿಗೆ ಒಳಗಾಗಿದ್ದರಿಂದ ಅವರು ವ್ಯವಸ್ಥೆಯ ವಿರುದ್ಧ ದನಿ ಎತ್ತುತ್ತಾರೆ. ಸಿದ್ಧಾಶ್ರಮ ಅವರು ಈ ಅಂಶವನ್ನು ಗುರುತಿಸಿದ್ದಾರೆ. ಕನಕದಾಸರ ಕೀರ್ತನೆಗಳ ಭಾಗಗಳನ್ನು ಉಲ್ಲೇಖಿಸಿ ಈ

ವಿಚಾರವನ್ನು ಸ್ಪಷ್ಟಪಡಿಸಿದ್ದಾರೆ. ಲೇಖನದ ಸಿಂಹಪಾಲು ಕನಕದಾಸರ ಕೀರ್ತನೆಗಳಿಗೆ ಮೀಸಲಾಗಿದೆ ಎಂಬುದೇ ಕನಕದಾಸರ ಪ್ರಖರ ಸಾಮಾಜಿಕ ಪ್ರಜ್ಞೆಗೆ ಸಾಕ್ಷಿಯಾಗಿದೆ. ಲೇಖಕರು ಪುರಂದರದಾಸರ ಕೀರ್ತನೆಗಳನ್ನು ವಿಶ್ಲೇಷಿಸುತ್ತ, ಸಮಾನತೆ, ಸತ್ಯ, ಸದಾಚಾರ, ಅನ್ನದಾನ, ವಿನಯ ಸಂಪನ್ನತೆ ಮುಂತಾದ ವಿಷಯಗಳಲ್ಲಿ ಪುರಂದರದಾಸರು ಇತರ ದಾಸರಿಗಿಂತ ಒಂದು ಹೆಜ್ಜೆ ಮುಂದೆ ಇದ್ದಾರೆ ಎಂದು ಹೇಳಿ, ಆವರಣದಲ್ಲಿ ಕನಕದಾಸರನ್ನು ಹೊರತು ಪಡಿಸಿ ಎಂದಿರುವುದು ಅತ್ಯಂತ ಸಮಂಜಸವಾಗಿದೆ. ಇದು ಕನಕದಾಸರ ಹಿರಿಮೆಗೆ ನಿದರ್ಶನವಾಗಿದೆ. ಲೇಖಕರು ಪುರಂದರದಾಸರ ಕೀರ್ತನೆಗಳಲ್ಲಿನ ವಿರೋಧಾಭಾಸಗಳನ್ನು ಸರಿಯಾಗಿ ಗುರುತಿಸಿದ್ದಾರೆ. ಇಲ್ಲಿ ಸಿದ್ಧಾಶ್ರಮ ಅವರು ಪ್ರಮುಖ ಕೀರ್ತನಕಾರರ ಸಾಹಿತ್ಯವನ್ನು ಮಾತ್ರ ವಿಶ್ಲೇಷಣೆಗೆ ಎತ್ತಿಕೊಂಡಿದ್ದಾರೆ. ಇದರೊಂದಿಗೆ ಅಪ್ರಸಿದ್ಧ ಕೀರ್ತನಕಾರರ ಕೆಲವು ಕೀರ್ತನೆಗಳನ್ನಾದರೂ ಆಯ್ದುಕೊಂಡು, ಅಲ್ಲಿ ಪ್ರಕಟಗೊಂಡಿರುವ ಸಾಮಾಜಿಕ ಪ್ರಜ್ಞೆಯನ್ನು ಶೋಧಿಸಲು ಪ್ರಯತ್ನಿಸಿದ್ದರೆ ಲೇಖನ ಇನ್ನಷ್ಟು ಮೌಲಿಕವಾಗುತ್ತಿತ್ತು.

ಹೊಸಗನ್ನಡದ ಮೊಟ್ಟಮೊದಲ ಬಂಡಾಯ ಕವಿ ಕುವೆಂಪು ಎಂಬುದು ತಿಳಿದ ವಿಚಾರ. ಕನ್ನಡ ಪ್ರಗತಿಶೀಲ ಸಾಹಿತಿಗಳಿಗೂ, ಅನಂತರದ ದಲಿತ–ಬಂಡಾಯ ಸಾಹಿತಿಗಳಿಗೂ ಪ್ರತ್ಯಕ್ಷವಾಗಿಯೋ, ಪರೋಕ್ಷವಾಗಿಯೋ ಕುವೆಂಪು ಪ್ರೇರಣೆಯಾಗಿದ್ದಾರೆಂಬುದನ್ನು ಒಪ್ಪಲೇಬೇಕು. ಕುವೆಂಪು ಸಾಹಿತ್ಯದಲ್ಲಿನ ಕ್ರಾಂತಿಕಾರಕ ಗುಣ ಮತ್ತು ಸಾಮಾಜಿಕ ಪ್ರಜ್ಞೆ ಅನಂತರದ ಕ್ರಾಂತಿಕಾರಕ ಸಾಹಿತಿಗಳಿಗೆ ಸ್ಫೂರ್ತಿಯಾಗಿದೆ. ಸಿದ್ಧಾಶ್ರಮ ಅವರು ನವೋದಯ ಸಂದರ್ಭದ ಕ್ರಾಂತಿಕಾರಕ ಕವನ ಸಂಕಲನವಾದ 'ಕ್ರಾಂತಿ ಕಹಳೆ'ಯನ್ನು ಇಲ್ಲಿ ವಿಮರ್ಶಿಸಿದ್ದಾರೆ. 'ಕ್ರಾಂತಿ ಕಹಳೆ ಮತ್ತು ಸಾಮಾಜಿಕ ಸ್ಪಂದನ' ಎಂಬ ಶೀರ್ಷಿಕೆಯಡಿಯಲ್ಲಿ ಕುವೆಂಪು ಅವರ ಸಾಮಾಜಿಕ ಕಾಳಜಿಯನ್ನು ಶೋಧಿಸಿದ್ದಾರೆ. ಕುವೆಂಪು ಅವರು ವಿಶೇಷವಾಗಿ ಪುರೋಹಿತಶಾಹಿಯ ವಿರುದ್ಧವಾಗಿ ಹಾಗೂ ಮೌಢ್ಯ, ಅಜ್ಞಾನಗಳ ವಿರುದ್ಧ ಸಮರ ಸಾರಿದ್ದರು. ಪ್ರಸ್ತುತ 'ಕ್ರಾಂತಿ ಕಹಳೆ'ಯಲ್ಲಿ ಅವರ ಈ ನಿಲುವು ಸ್ಪಷ್ಟವಾಗಿ ಬಿಂಬಿತವಾಗಿದೆ. ಸಿದ್ಧಾಶ್ರಮ ಅವರು ನಿದರ್ಶನಗಳ ಮೂಲಕ ಕುವೆಂಪು ಅವರ ಸಾಮಾಜಿಕ ಕಾಳಜಿಯನ್ನು ನಿರೂಪಿಸಿದ್ದಾರೆ. ಕವಿಯ ಸರ್ವೋದಯ ತತ್ವ, ಪೂರ್ಣದೃಷ್ಟಿ ಹಾಗೂ ಪ್ರಜಾತಂತ್ರ ವ್ಯವಸ್ಥೆಯ ಬಗೆಗಿನ ಆಶಾವಾದಿತನ ಇತ್ಯಾದಿಗಳನ್ನು ಲೇಖಕರು ಖಚಿತವಾಗಿ ಗುರುತಿಸಿರುವುದಲ್ಲದೆ, ಕುವೆಂಪು ಅವರ ಸಂದೇಶಗಳನ್ನು ದಾಖಲಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಕುವೆಂಪು ಅವರನ್ನು 'ಯುಗ ಪುರುಷ'ರೆಂದು ಕರೆದಿರುವುದರಲ್ಲಿ ಅತಿಶಯೋಕ್ತಿಯಿಲ್ಲ.

ಬಿ.ಎಂ.ಶ್ರೀ.ಯವರ 'ಗದಾಯುದ್ಧ ನಾಟಕಂ' ಕನ್ನಡ ನವೋದಯದ ಆರಂಭಿಕ ಘಟ್ಟದ ಕೃತಿಗಳಲ್ಲಿ ಅತ್ಯಂತ ಪ್ರಮುಖವಾದುದು. ಸಿದ್ಧಾಶ್ರಮ ಅವರು 'ನಿಕಷ'ದಲ್ಲಿ ಪ್ರಸ್ತುತ ಕೃತಿಯನ್ನು ಕುರಿತು ದೀರ್ಘವಾಗಿ ಚರ್ಚಿಸಿದ್ದಾರೆ. ಲೇಖಕರು ಇಲ್ಲಿ ರನ್ನನ 'ಗದಾಯುದ್ಧ' ಕಾವ್ಯ ಮತ್ತು ಬಿ.ಎಂ.ಶ್ರೀಯವರ ನಾಟಕ ಇವೆರಡನ್ನೂ ತೌಲನಿಕ ವಿವೇಚನೆಗೆ ಒಳಪಡಿಸಿರುವುದರಿಂದ ಲೇಖನಕ್ಕೆ ಒಂದು ಅನನ್ಯತೆ ಪ್ರಾಪ್ತವಾಗಿದೆ. ರನ್ನನ 'ಗದಾಯುದ್ಧ' ಹತ್ತು ಆಶ್ವಾಸಗಳನ್ನುಳ್ಳ ಚಂಪೂ ಕಾವ್ಯ. ಇದರಲ್ಲಿನ ನಾಟಕೀಯ ಗುಣವನ್ನು ಗುರುತಿಸಿದ ಶ್ರೀಯವರು ಅದನ್ನು ಐದು ಅಂಕಗಳ ನಾಟಕವನ್ನಾಗಿ ಪರಿವರ್ತಿಸಿದ್ದಾರೆ. ಈ ಪ್ರಕ್ರಿಯೆಯಲ್ಲಿ ಕೆಲವು ಮಾರ್ಪಾಟುಗಳು ಮತ್ತು ಹೊಸ ಸೇರ್ಪಡೆಗಳನ್ನು ಮಾಡಿದ್ದಾರೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಎರಡು ಕೃತಿಗಳ ತೌಲನಿಕ ಚರ್ಚೆ ಔಚಿತ್ಯ ಪೂರ್ಣವಾಗಿದೆ. ಸಿದ್ಧಾಶ್ರಮ ಅವರು ಈ ಚರ್ಚೆಯಲ್ಲಿ ಶ್ರೀಯವರ ನಾಟಕ ರನ್ನನ ಕಾವ್ಯಕ್ಕಿಂತ ಭಿನ್ನವಲ್ಲ, ರನ್ನನಕಾವ್ಯ ಹೆಚ್ಚು ವಸ್ತುನಿಷ್ಟವಾಗಿದೆ ಹಾಗೂ ಶ್ರೀಯವರು ಮಾಡಿಕೊಂಡಿರುವ ಮಾರ್ಪಾಡುಗಳಿಂದ ಪ್ರಯೋಜನವಾಗಿಲ್ಲವೆಂದು ಅಭಿಪ್ರಾಯಪಟ್ಟಿದ್ದಾರೆ. ಅವರ ಈ ಮಾತುಗಳಿಂದ ಕೃತಿಯಲ್ಲಿ ಶ್ರೀಯವರ ವೈಶಿಷ್ಟ್ಯವೇನೂ ಇಲ್ಲವೆಂಬುದನ್ನು ಗಮನಿಸಬಹುದು: "ರನ್ನನ ಕಾವ್ಯದಲ್ಲಿಯೇ ನಾಟಕದ ಎಲ್ಲ ಲಕ್ಷಣಗಳೂ ತುಂಬಿಕೊಂಡಿವೆಯಾದ್ದರಿಂದ ಶ್ರೀಯವರ ನಾಟಕ ರಚನೆಯ ಪ್ರಯತ್ನದಲ್ಲಿ ಅಂಥ ಯಾವ ಸ್ವಂತಿಕೆಯೂ ಕಂಡು ಬರುವುದಿಲ್ಲ. ಅಷ್ಟೇ ಅಲ್ಲ ನಾಟಕದ ಶೈಲಿಯ, ಸಂವಿಧಾನದ ಶ್ರೇಯಸ್ಸೂ ರನ್ನನಿಗೇ ಸಲ್ಲುತ್ತದೆ. ನಾಟಕದ ಕ್ರಿಯೆ ಉದ್ದಕ್ಕೂ ಕಾವ್ಯದ ವಿನ್ಯಾಸವನ್ನೇ ಸಂಪೂರ್ಣವಾಗಿ ಅನುಸರಿಸಿಕೊಂಡು ಹೋಗಿದೆ. ಅಲ್ಲದೆ ಮುಖ್ಯ ಪಾತ್ರಗಳ ಬೆಳವಣಿಗೆಯಲ್ಲೂ ಅಂಥ ಯಾವ ಬದಲಾವಣೆಯೂ ಇಲ್ಲದೆ ಕಾವ್ಯವನ್ನೇ ಅನುಸರಿಸಿದೆ." ಈ ಮಾತುಗಳಲ್ಲಿ ಲೇಖಕರು 'ಗದಾಯುದ್ಧ ನಾಟಕ'ದ ಸತ್ವ ಮತ್ತು ಮೌಲಿಕತೆಯಲ್ಲಿ ರನ್ನ ಕವಿಯ ಪಾತ್ರವಿದೆಯೇ ಹೊರತು ಬಿ.ಎಂ.ಶ್ರೀಯವರದ್ದಲ್ಲವೆಂದು ಸಾರಿದ್ದಾರೆ. ಆದರೆ

ಪ್ರಾಚೀನ ಮಹಾಕಾವ್ಯವೊಂದನ್ನು ಆಧುನಿಕ ನಾಟಕವನ್ನಾಗಿ ಪರಿವರ್ತಿಸಿರುವುದರಲ್ಲಿ ವೈಶಿಷ್ಟ್ಯವಿದೆ ಎಂಬುದನ್ನು ಮರೆಯುವಂತಿಲ್ಲ. ನವ್ಯೋತ್ತರ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಬಂಡಾಯ ಸಾಹಿತ್ಯ ಸಂಘಟನೆಗೆ ಬಹಳ ಮಹತ್ವದ ಸ್ಥಾನವಿದೆ. ಸಮಾಜದ ಬದಲಾವಣೆಯನ್ನೇ ಮುಖ್ಯ ಕಾಳಜಿಯನ್ನಾಗಿಸಿಕೊಂಡು ಸಾಹಿತ್ಯ ಸೃಷ್ಟಿಯಲ್ಲಿತೊಡಗಿದ್ದ ಲೇಖಕರಿಗೆ ಒತ್ತಾಸೆಯಾಗಿ ನಿಂತದ್ದು ಬಂಡಾಯ ಸಾಹಿತ್ಯ ಸಂಘಟನೆ. ಇಂಥ ಸಾಮಾಜಿಕ, ಸಾಹಿತ್ಯಿಕ ಸಂಘಟನೆಯನ್ನು ಕುರಿತು ಸಿದ್ಧಾಶ್ರಮ ಅವರು ಆಳವಾದ ಚಿಂತನೆಗೆ ತೊಡಗಿದ್ದಾರೆ. 'ನಿಕಷ'ದಲ್ಲಿನ 'ಬಂಡಾಯ ಸಾಹಿತ್ಯ ಸಂಘಟನೆ:ಒಂದು ಚಿಂತನೆ' ಎಂಬ ಲೇಖನ ಸಮಕಾಲೀನ ಸಾಮಾಜಿಕ, ಸಾಂಸ್ಕೃತಿಕ ವೇದಿಕೆಯೊಂದರ ಬಗೆಗೆ ನಡೆಸಿದ ಚಿಂತನೆಯ ಫಲವಾಗಿದೆ. ಲೇಖನದ ಆರಂಭದಲ್ಲಿ ಹನ್ನೆರಡನೆಯ ಶತಮಾನದ ವಚನಕಾರರ ಮತ್ತು ಕುವೆಂಪು ಅವರ ಬಂಡಾಯ ಪ್ರಜ್ಞೆಯನ್ನು ಲೇಖಕರು ವಿವರಿಸಿದ್ದಾರೆ. ಇದರಿಂದ ಬಂಡಾಯ ಸಾಹಿತ್ಯ ಸಂಘಟನೆ ದಿಢೀರನೆ ಶೂನ್ಯದಿಂದ ನಿರ್ಮಾಣಗೊಂಡಿದ್ದಲ್ಲವೆಂಬುದನ್ನು ಅರಿಯಬಹುದು. ಹಿಂದಿನ ಸಮಾಜ ಸುಧಾರಕರ ಸಂದೇಶಗಳು ಬಂಡಾಯ ಸಾಹಿತ್ಯ ಸಂಘಟನೆಯ ಹಿನ್ನೆಲೆಯಲ್ಲಿವೆ ಎಂಬುದನ್ನು ಲೇಖಕರು ಸ್ಪಷ್ಟಪಡಿಸಿದ್ದಾರೆ.

ಸಿದ್ಧಾಶ್ರಮ ಅವರು ಬಂಡಾಯ ಸಾಹಿತ್ಯ ಸಂಘಟನೆಯ ಬಗೆಗೆ ಕೆಲವು ಆಕ್ಷೇಪಾರ್ಹ ನುಡಿಗಳನ್ನಾಡಿದ್ದಾರೆ: "ಬಂಡಾಯ ಸಾಹಿತ್ಯ ಸಂಘಟನೆ ಅಪ್ಪಟ ಸಾಂಸ್ಕೃತಿಕ ಕಾಳಜಿಯಿಂದ, ಸಮಕಾಲೀನ ಬದುಕಿನ ಪ್ರಜ್ಞೆಯಿಂದ ಹುಟ್ಟಿದ್ದಲ್ಲ ಎಂದು ಆಳವಾಗಿ ಆಲೋಚನೆ ಮಾಡುವವರಿಗೆ ಅನಿಸದೆ ಇರದು. ಧರ್ಮಸ್ಥಳದಲ್ಲಿ ನಡೆದ ಅಖಿಲ ಭಾರತ ಐವತ್ತೊಂದನೆಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಅವಕಾಶ ಸಿಗದೆ ಸಾಹಿತ್ಯ ಪರಿಷತ್ತಿನೊಂದಿಗೆ ಮುನಿಸಿಕೊಂಡು ಒಂದು ರೀತಿಯ ಪ್ರತೀಕಾರ ಮನೋಭಾವದಿಂದ ಹುಟ್ಟಿದ್ದು ಈ ಬಂಡಾಯ ಸಾಹಿತ್ಯ ಸಂಘಟನೆ."- ಈ ಮಾತುಗಳ ಉತ್ತರಾರ್ಧದಲ್ಲಿ ಸ್ವಲ್ಪ ಸತ್ಯಾಂಶವಿದೆಯಾದರೂ, ಪೂರ್ವಾರ್ಧವು ಸತ್ಯದೂರವಾಗಿದೆ. ಬಂಡಾಯ ಸಾಹಿತ್ಯ ಸಂಘಟನೆ ಮೂಲತಃ ಸಾಂಸ್ಕೃತಿಕ, ಸಾಮಾಜಿಕ ಕಾಳಜಿಯಿಂದ ಹುಟ್ಟಿದ್ದೆಂಬುದು ದಲಿತ-ಬಂಡಾಯ ಸಾಹಿತ್ಯದ ತಾತ್ವಿಕತೆಯಿಂದ ವೇದ್ಯವಾಗುತ್ತದೆ. ಸಂಘಟನೆಯ ಸೈದ್ಧಾಂತಿಕತೆಯನ್ನು ಕುರಿತು ಚರ್ಚಿಸಿರುವ ಎಲ್ಲ ವಿದ್ವಾಂಸರೂ ಇದನ್ನು ಸ್ಪಷ್ಟಪಡಿಸಿದ್ದಾರೆ. ಆದ್ದರಿಂದ "ಬಂಡಾಯ ಸಾಹಿತ್ಯ ಸಂಘಟನೆ ಅಪ್ಪಟ ಸಾಂಸ್ಕೃತಿಕ ಕಾಳಜಿಯಿಂದ ಹುಟ್ಟಿದ್ದಲ್ಲ" ಎಂಬ ಹೇಳಿಕೆ ಸಮಂಜಸವಾದುದಲ್ಲ. ಲೇಖಕರಿಗೆ ಬಂಡಾಯ ಸಾಹಿತ್ಯ ಸಂಘಟನೆಯ ಸಾಮಾಜಿಕ ಚಟುವಟಿಕೆಗಳ ಬಗೆಗೆ ಅಪಾರ ಮೆಚ್ಚುಗೆಯಿದೆ, ಆದರೆ ಈ ಚಟುವಟಿಕೆಗಳು ಹೆಚ್ಚುಕಾಲ ಉಳಿಯಲಿಲ್ಲ ಎಂಬ ಬಗೆಗೆ ವಿಷಾದವಿದೆ ಎಂಬುದನ್ನು ಲೇಖನದಿಂದ ಗ್ರಹಿಸಬಹುದು. ಜೊತೆಗೆ ಸಂಘಟನೆಯಲ್ಲಿನ ಸರ್ವಾಧಿಕಾರಿ ಪ್ರವೃತ್ತಿಯ ಬಗೆಗೆ ಅಸಮಾಧಾನ, ಸಂಘಟನೆಯ ಅಡಿಯಲ್ಲಿ ಸೃಷ್ಟಿಯಾದ ಸಾಹಿತ್ಯದ ಪ್ರಮಾಣದ ಬಗೆಗೆ ಅತೃಪ್ತಿ ಹಾಗೂ ಸಂಘಟನೆಯ ಮಹತ್ತರ ಉದ್ದೇಶ ಈಡೇರಲಿಲ್ಲ ಎಂಬ ಬಗ್ಗೆ ಲೇಖಕರಿಗೆ ಬಹಳ ವಿಷಾದವಿದೆ ಎಂಬುದು ಗೊತ್ತಾಗುತ್ತದೆ.

ಮಲೆಯಾಳೀ ಬರಹಗಾರರಾದ ವೈಕ್ಕಂ ಮಹಮ್ಮದ್ ಬಷೀರ್‌ಅವರ 'ನನ್ನಜ್ಜನಿಗೊಂದು ಆನೆಯಿತ್ತು' ಎಂಬ ಕಿರುಕಾದಂಬರಿಯನ್ನು ಸಿದ್ಧಾಶ್ರಮ ಅವರು ಕನ್ನಡ ಓದುಗರಿಗೆ ಪರಿಚಯಿಸಿದ್ದಾರೆ. ಲೇಖಕರು ಇಲ್ಲಿ ಕೃತಿ ವಿಮರ್ಶೆಗೆ ತೊಡಗದೆ ಅನ್ಯ ಭಾಷೆಯ ಕೃತಿಯೊಂದನ್ನು ಕನ್ನಡಿಗರಿಗೆ ಪರಿಚಯಿಸುವ ಕೆಲಸವನ್ನಷ್ಟೆ ಮಾಡಿದ್ದಾರೆ. ಜೊತೆಗೆ "ನನ್ನಜ್ಜನಿಗೊಂದು ಆನೆಯಿತ್ತು" ಬಷೀರರ ಉತ್ತಮ ಕೃತಿ ಮಾತ್ರವಲ್ಲ, ಮಲೆಯಾಳಿ ಭಾಷೆಯಲ್ಲಿನ ಶ್ರೇಷ್ಠ ಕೃತಿ" ಎಂದು ಕೃತಿಯ ಮಹತ್ವವನ್ನು ಸಾರಿದ್ದಾರೆ.

'ನಿಕಷ' ದಲ್ಲಿನ 'ಸಮಗ್ರ ದೃಷ್ಟಿಯ ಬಸವ ಭಾವನೆ' ಮತ್ತು 'ಸಾಮಾಜಿಕ ಅರಿವಿನ ವಿಮರ್ಶಕ ಆರ್ಕೆ' ಎಂಬ ಲೇಖನಗಳು ವಿಮರ್ಶಾ ಸಂಕಲನಗಳನ್ನು ಕುರಿತ ವಿಮರ್ಶೆಯಾಗಿದೆ. ಸಿ.ಪಿ.ಕೆ.ಯವರ 'ಬಸವಭಾವನೆ'ಯನ್ನು ವಿಶ್ಲೇಷಣೆಗೆ ಎತ್ತಿಕೊಂಡಿರುವ ಲೇಖಕರು, ಸಿ.ಪಿ.ಕೆ.ಯವರ ಸಂಶೋಧಕ ಗುಣವನ್ನು ಮತ್ತು ಅವರ ವಿಮರ್ಶಾ ಸಾಮರ್ಥ್ಯವನ್ನು ಸರಿಯಾಗಿ ಗುರುತಿಸಿದ್ದಾರೆ. ಹಾಗೆಯೇ ಆರ್ಕೆ ಮಣಿಪಾಲ ಅವರ 'ಸಾಹಿತ್ಯ ಸಿದ್ಧಾಂತ ಮತ್ತು ಹೋರಾಟ' ಕೃತಿಯಲ್ಲಿ ವ್ಯಕ್ತವಾಗಿರುವ ಆರ್ಕೆಯವರ ಸಾಮಾಜಿಕ ಕಾಳಜಿಯನ್ನು ಗುರುತಿಸಿ, ಅವರನ್ನು ಸಾಮಾಜಿಕ ಅರಿವಿನ ವಿಮರ್ಶಕರೆಂದು ಕರೆದಿರುವುದಲ್ಲದೆ, ಅವರ ಚಿಂತನೆಗಳಲ್ಲಿ

ವ್ಯಕ್ತವಾಗುವ ವೈಜ್ಞಾನಿಕತೆ, ವೈಚಾರಿಕತೆ ಮತ್ತು ಸಾಮಾಜಿಕ ಪ್ರಜ್ಞೆಗಳ ಹಿನ್ನೆಲೆಯಲ್ಲಿ ಅವರನ್ನು ಸದಭಿರುಚಿಯ ಚಿಂತಕರೆಂದು ಕರೆದಿದ್ದಾರೆ.

ಸಿದ್ಧಾಶ್ರಮ ಅವರು 'ನಿಕಷ'ದಲ್ಲಿ ಕೆಲವು ಸೃಜನಶೀಲ ಮತ್ತು ಸೃಜನೇತರ ಕೃತಿಗಳನ್ನು ನಿಕಷಕ್ಕೊಡ್ಡಿದ್ದಾರೆ. ಈ ಪ್ರಕ್ರಿಯೆಯಲ್ಲಿ ನಿರ್ಲಿಪ್ತತೆ ಮತ್ತು ನಿಷ್ಪಕ್ಷಪಾತ ಧೋರಣೆಯನ್ನು ಕಾಯ್ದುಕೊಂಡಿದ್ದಾರೆಂಬುದರಲ್ಲಿ ಅನುಮಾನವಿಲ್ಲ. ಕೃತಿಗಳಲ್ಲಿನ ಗುಣಾತ್ಮಕ ಅಂಶಗಳನ್ನು ಕಂಡು ಮೆಚ್ಚಿ ಪ್ರಶಂಸಿಸುವಂತೆ, ಕೊರತೆಗಳು ಅಥವಾ ಮಿತಿಗಳನ್ನು ಸಹ ನಿರ್ದಾಕ್ಷಿಣ್ಯವಾಗಿ ದಾಖಲಿಸುತ್ತಾರೆ. ಇಂಥ ಸಮತೋಲನಾತ್ಮಕ ಗುಣದಿಂದ ಹಾಗೂ ವಸ್ತುನಿಷ್ಠ ವಿಮರ್ಶೆಯಿಂದ ಪ್ರಸ್ತುತ ಕೃತಿ ಉತ್ತಮ ವಿಮರ್ಶಾ ಸಂಕಲನವಾಗಿದೆ.

--------------oooooo-------------